# IN THE COURT OF THE ADDL. SENIOR CIVIL JUDGE & JMFC., GUBBI
# OS – **346/2024**

Witness recalled and duly sworn on : 12.12.2025.

<u>Further cross Examination: by Counsel for Defendant No.1 to 6 :</u>

ದಾವಾ ಸರ್ವೆ ನಂಬರ್ ನ 14 ಎಕರೆ 4 ಗುಂಟೆಯ ಚಕ್ಕುಬಂದಿ ನನಗೆ ಗೊತ್ತಿದೆ. ಅದರ ಪೂರ್ವಕ್ಕೆ ಬಿಂದು, ಹನುಮಯ್ಯ. ಪಶ್ಚಿಮಕ್ಕೆ ಬೇರಯವರ ಸ್ವತ್ತು. ಪಶ್ಚಿಮಕ್ಕೆ ನನ್ನ 16 ಎಕರೆ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಜಮೀನು ದಾವಾ ಸರ್ವೆ ನಂಬರ್ ಜಮೀನಿನ ಪೂರ್ವಕ್ಕೆ ಹೊಂದುಕೊಂಡಿದೆ ಮತ್ತು ಪಶ್ಚಿಮಕ್ಕೆ ಇರುವುದಿಲ್ಲ. ದಾವಾ ಆಸ್ತಿಯ ಮೌಲ್ಯವು ಸುಮಾರು 6-8 ಕೋಟಿ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಮತ್ತು ಅದಕ್ಕೆ ಹೊಂದುಕೊಂಡಿರುವ ನನ್ನ ಜಮೀನಿನಲ್ಲಿ ರೆಸಾರ್ಟ ಮತ್ತು ನಿವೇಶನಗಳನ್ನು ಮಾಡಲು ಕರಾರು ಪತ್ರವನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ದಾವಾ ಸರ್ವೆ ನಬರ್ ಪೂರ್ಣ ವಿಸ್ತೀರ್ಣ 14 ಇರುವುದಿಲ್ಲ ಮತ್ತು ಸದರಿ ವಿಸ್ತೀರ್ಣ 12 ಎಕರೆ ಇರುತ್ತದೆ ಎಂದರೆ ಕರಾರು ಪತ್ರ ಆಗುವ ಸಮಯದಲ್ಲಿ 14 ಎಕರೆ 4 ಗುಂಟೆಯ ಪಹಣಿ ಇರುತ್ತದೆ. ನನ್ನ ರಾಜಕೀಯ ಬಲದಿಂದ ಸಾಕ್ಷಿಗಳನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ.

ಪ್ರಶ್ನೆ ಃ ಸಾಕ್ಷಿಪ್ರಮಾಣ ಪತ್ರದಲ್ಲಿ ನಿಮ್ಮ ವೃತ್ತಿಯನ್ನು ಬಿಸನೆಸ್ ಎಂದು ಬರೆಸಿದ್ದು , ಯಾವ ಬಿಸನೆಸ್ ಮತ್ತು ಸದರಿ ಬಿಸನೆಸ್ ಗೆ ಸಂಭಂದಪಟ್ಟಿರುವ ಪರವಾನಗಿಯನ್ನು ಹಾಜರುಪಡಿಸಿದ್ದಿರಾ?

ಉತ್ತರಃ As the Suit is for Specific performance of agreement of sale dated 13.04.2022, the said question is irrelevant.

ನಾನು ತೆರಿಗೆ ಪಾವತಿದಾರ. ನನ್ನ ತೆರಿಗೆ ಪಾವತಿ ಮಾಡಿರುವ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಅವುಗಳನ್ನು ಹಾಜರುಪಡಿಸಬಲ್ಲೇನು. ಕರಾರು ಪತ್ರದಲ್ಲಿ ಪ್ರತಿವಾದಿಗಳು ಸಹಿ ಮಾಡಿಲ್ಲ ಆದರೆ ನಾನು ಅವರ ಸಹಿಗಳನ್ನು

ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ವ್ಯವಸಾಯದ ಜಮೀನು ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿಗಳು ಜೀವನ ನಡೆಸುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮಾರಾಟ ಮಾಡುವ ಉದ್ದೇಶ ಇಲ್ಲದೆ ಇದ್ದರು ಸಹ ನಾನು ಸುಳ್ಳು ದಾಖಲೆಯನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಕಬಳಿಸಲು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**Re examination – Nil.**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi